


**ಕಿರಣ ಭಟ್**

ಕಲೆ: ಸಂತೋಷ್ ಸಸಿಹಿತ್ಲು


# ಕೆರೆ

ನಮ್ಮ ಊರ ಹಾದಿ ಬದಿಗೆ
ದೊಡ್ಡದೊಂದು ಕೆರೆ.
ನೀಲಿ ನೀರು, ಬದಿಗೆ ಜಾರು
ಕಪ್ಪೆಯದರ ದೊರೆ.

ಸಣ್ಣ, ದೊಡ್ಡ, ಉದ್ದ ಮೀನು
ಚಂದ ಅರಳು ತಾವರೆ
ನಡುವೆ ಕತ್ತು ಎತ್ತಿ ನಿಂತ
ಬೆಳ್ಳ ಬೆಳ್ಳ ಕೊಕ್ಕರೆ

ಎಷ್ಟು ಆಸೆ ಕೆರೆಗೆ ಹೋಗಿ
ಆಟವಾಡಲಿಕ್ಕೆ
ಕೆರೆ ಬದಿಗೆ ಹೋದ್ರೆ ನೋಡು!
ಅಜ್ಜಿ ಬರೇ ಕರಕರೆ

ಅಜ್ಜಿ ಮಲಗಿದಾಗ ಎದ್ದು
ಕೆರೆಯ ದಡಕೆ ಓಡುವೆ
ದೂರ ನಿಂತು ಹೊಳೆವ ಮೈಯ
ಮೀನಿನಾಟ ನೋಡುವೆ.

ಹಕ್ಕಿ ಜೊತೆಗೆ ಹಾಡು ಹಾಡಿ
ಚಿಟ್ಟೆ ಜೊತೆಗೆ ಹಾರುವೆ
ಅಜ್ಜಿ ಎದ್ದುಬಿಡುವ ಮೊದಲೇ
ಬೇಗ ಮನೆಗೆ ಓಡುವೆ.

